**ದಿನಾಂಕಃ 26/02/2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ವಿ ಕೆ ವಕೀಲರಿಂದಃ**

ದಿನಾಂಕ 09.08.2019 ರಂದು ನಾನು ಈ ಪ್ರಕರಣದಲ್ಲಿ ಸಾಕ್ಷಿ ಹೇಳುವಾಗ ನನ್ನ ವಾರ್ಷಿಕ ಆಧಾಯದ ಬಗ್ಗೆ ದಾಖಲೆ ತಂದು ಕೊಡುತ್ತೇನ ಎಂದು ಹೇಳಿದ್ದೇನು ಎಂದರೆ ಸರಿ. ಆ ಆಧಾಯ ಪ್ರಮಾಣ ಪತ್ರವನ್ನು ನಾನು ಕೊಟ್ಟಿಲ್ಲ ನನ್ನ ಹೆಸರಿನಲ್ಲಿ ಜಮೀನುಗಳು ಇವೆ ಎಂದು ನಾನು ಈ ಹಿಂದೆ ಸಾಕ್ಷಿ ಹೇಳುವಾಗ ಹೇಳಿಲ್ಲ. ಬೇರೆಯವರ ಜಮೀನು ಮಾಡುತ್ತೇನೆ. ನಾನು ಜಮೀನಿನ ದಾಖಲೆಗಳನ್ನು ಕೊಟ್ಟಿಲ್ಲ. ನಾನು ನನ್ನ ಕರ್ನಾಟಕ ಬ್ಯಾಂಕ್ ಹಾಗೂ ಎಸ್ ಬಿ ಐ ಹಾಗೂ ಯೂನಿಯನ್ ಬ್ಯಾಂಕಿನ ಪಾಸ್ ಬುಕ್ ಗಳನ್ನು ಕೊಡುತ್ತೇನೆ ಎಂದು ಹೇಳಿದ್ದೇನು. ನನ್ನ ಬಳಿ ಎಷ್ಟು ಇದ್ದವು ಅವುಗಳನ್ನು ಹಾಜರುಪಡಿಸಿದ್ದೇನು. ನನ್ನ ವಾರ್ಷಿಕ ಆಧಾಯದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನನ್ನ ಬಳಿ ಆರೋಪಿಗೆ ಹಣ ಕೊಡುವಷ್ಟು ಸಾಮರ್ಥ್ಯ ಇಲ್ಲ ಎಂದರೆ ಸರಿ. ಆತನಿಗೆ ಸಾಲ ಕೊಟ್ಟಿದ್ದೇನೆ ಎಂದು ಸುಳ್ಳು ಕೇಸು ಹಾಕಿ ಆರೋಪಿಗೆ ಮತ್ತು ನ್ಯಾಯಾಲಯಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕೊಟ್ಟ ಒಂದು ರಿಪ್ಲೆ ನೊಟೀಸಿಗೆ ನಾನು ಉತ್ತರ ಕೊಟ್ಟಿಲ್ಲ ಎಂದರೆ ಸರಿ ನಾನು ಸುಳ್ಳು ಕೇಸು ಮಾಡಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಜೆ.ವಿ.ಕುಲಕರ್ಣಿ)
2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.